ಶ್ರೀ ಪಾಟಾಳ್ ನಾಗರಾಜ್.—ತಮ್ಮಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ, ವಿರೋಧ ಪಕ್ಷದವರು ಸರ್ಕಾರ ಮಾಡತಕ್ಕ ತಪ್ಪು ಎತ್ತಿ ಹಿಡಿಯುತ್ತಾರೆ. ಆಡಳಿತ ಕಾಂಗ್ರೆಸ್ಸಿನ ಸದಸ್ಯರಾಗಿದ್ದರೆ, ಈ ಕಡೆ ಇದ್ದಾಗ ನಮ್ಮನ್ನೆ ಕೊತುಕೊಳ್ಳುತ್ತಿದ್ದರೇ ?

ಅಧ್ಯಕ್ಷರು.—ಏನು ಹೇಳಬೇಕಾದರೂ ಜವಾಬ್ದಾರಿಯಿಂದ ಹೇಳಬೇಕು. ಯಾರಾದರೂ ಒಂದು ವಿಷಯದ ಮೇಲೆ ಮಾತನಾಡಿದರೆ, ತಾವೂ ಮಾತನಾಡಬೇಕ ಎದ್ದು ನಿಲ್ಲುವುದು ಸರಿಯಲ್ಲ.

ಶ್ರೀ ಪಾಟಾಳ್ ನಾಗರಾಜ್.—ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಇದೇ ವಿಷಯದಲ್ಲಿ ಈ ದಿವನ, ಹಬ್ಬಳ್ಳಿ ಮತ್ತು ಧಾರವಾಡ ನಗರ ನಿಯೋಗ ಬಂದಿತ್ತು, ಮುಖ್ಯಮಂತ್ರಿಗಳನ್ನು ಭೇಟಿ ಮಾಡಲಕ್ಕೆ ನಿಯೋಗದ ಜೊತೆಯಲ್ಲಿ ನಾನು ಹೋಗಿದ್ದೆ. ಮಾನ್ಯ ಸದಸ್ಯರಾದ ಕೋಣಂದೂರು ಲಿಂಗಪ್ಪನವರು ಇದರ ಬಗ್ಗೆ ಒಂದು ಕಾರ್ ಅಟೆನ್‌ಷನ್ ನೋಟೀಸನ್ನು 10 ದಿವಸದ ಹಿಂದೆ ಕೊಟ್ಟಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದು ಕೊಂಡಿದ್ದೀರಾ ? ಇಲ್ಲಿ ಬಂದಿರತಕ್ಕ ಪ್ರಶ್ನೆ, ಏನೆಂದರೆ, ಈ ತಿಂಗಳ 15ನೇ ತಾರೀಖಿಗೆ ಅಡ್ಮಿಷನ್ ಕ್ಲೋಸ್ ಆಯಿತು. ಪ್ರೈವೇಟ್ ಕಾಲೇಜಿನವರು 200 ರೂಪಾಯಿಗಳಿಂದ 400 ರೂಪಾಯಿಗಳವರೆಗೆ ಅಡ್ಮಿಷನ್ ಫೀಸ್ ವಿಧಿಸಿದ್ದಾರೆ. ಈ ದೃಷ್ಟಿಯಿಂದ ಇದು ಪ್ರಾಮುಖ್ಯವಾದ ವಿಷಯ. ಆದ್ದರಿಂದ ನಾನು ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಇದು ನಾಳೆ ಅಥವಾ ಸೋಮವಾರದ ಕಾರ್ಯಕ್ರಮ ಪಟ್ಟಿಯಲ್ಲಿ ಬರುವ ಹಾಗೆ ಮಾಡಬೇಕು, ಇಲ್ಲದೆ ಹೋದರೆ, ಅಲ್ಲಿ ಪ್ರದರ್ಶನ ಆಗಿ ಅಸ್ಪಿಪಾಸ್ಪಿಗಳಿಗೆ ನಷ್ಟವಾಗುವ ಸಂದರ್ಭ ಇದೆ. ಇದನ್ನು ತೊಡೆದುಹಾಕಬೇಕು ಇದಕ್ಕಾಗಿ ತಾವು ಶೀಘ್ರವಾಗಿ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದು

ಶ್ರೀ ಎಂ. ಎಸ್. ಕೃಷ್ಣನ್.—ವಿದ್ಯಾ ಮಂತ್ರಿಗಳು ಇಲ್ಲದೆ ಇರುವುದರಿಂದ ಮುಖ್ಯಮಂತ್ರಿಗಳ ಗಮನಕ್ಕೆ ಒಂದ ವಿಷಯವನ್ನು ತರಬಯಸುತ್ತೇನೆ. ಮಲ್ಲೇಶ್ವರಂ ಗವರ್ನಮೆಂಟ್ ಜೂನಿಯರ್ ಕಾಲೇಜಿನ ಕಟ್ಟಡವನ್ನು ಪ್ರೈವೇಟ್ ಕಾಲೇಜನ್ನು ಓಪನ್ ಮಾಡಲಕ್ಕೆ ಕೊಟ್ಟಿದ್ದಾರೆ. ಈ ತರಹ ಘೋರಣೆ ತಾಳುವುದು ಸರಿಯಲ್ಲ. ಗವರ್ನಮೆಂಟ್ ಕಟ್ಟಡವನ್ನು ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗೆ ಕೊಡುವುದು ಅರ್ಥವಿಲ್ಲದ ಮಾತು. ಇದು ಒಂದು ಪಾಲಿಸಿಯ ಪ್ರಶ್ನೆ. ಆದರಿಂದ ಇದನ್ನು ಸರ್ಕಾರದ ಗಮನಕ್ಕೆ ತರ ತ್ತಿದ್ದೇನೆ.

Drought Conditions in Bijapur and other Districts—Statement of Chief Minister

ಶ್ರೀ ಜಿ. ಎನ್. ಪಾಟೀಲ್.—ಬಿಜಾಪುರ ಜಿಲ್ಲೆಯಲ್ಲಿ ದುಷ್ಕಾಲ ಕಾಮಗಾರಿಯು ನಲುವಾಗಿ 10-15 ದಿವಸಗಳ ಹಿಂದೆ ಒಂದು ಕಾರ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ. ಇವತ್ತಿನವರೆಗೆ ಅದಕ್ಕೆ ಉತ್ತರ ಬಂದಿಲ್ಲ. ಅಲ್ಲಿಯ ಪರಿಸ್ಥಿತಿ ನೋಡಿದರೆ ತೀರಾ ಹದಗೆಟ್ಟಿದೆ. ಆದ್ದರಿಂದ ಮುಖ್ಯಮಂತ್ರಿಗಳು ಈ ಬಗ್ಗೆ ಏನಾದರೂ ಉತ್ತರ ಕೊಡುತ್ತಾರೆಯೇ ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಎರ್. ಕಬಾಡಿ.—ಬಿಜಾಪುರ ಜಿಲ್ಲೆಯಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ. ಅದರ ನಲುವಾಗಿ, ಇನ್ನೂ ಏನೂ ವಿಚಾರ ಮಾಡಿಲ್ಲ ಎಂದು ಕಾಣುತ್ತದೆ, ಎಷ್ಟೊಂದೇ ಜನ ಬಹಳ ಕಷ್ಟದಲ್ಲಿದ್ದಾರೆ ಎಂದು ನಾವು ಹೇಳುತ್ತಲೇ ಇದ್ದೇವೆ, ನೀವು ಕೇಳುತ್ತಲೇ ಇದ್ದೀರಿ. ಏನೋ ಕ್ರಮತೆಗೆದುಕೊಳ್ಳುತ್ತೀರಿ ಎಂದು ಇಲ್ಲಿಯವರೆಗೆ ಸಮಾಧಾನಪಟ್ಟುಕೊಂಡಿದ್ದೆವು. ಈಗ ಸಹನೆ ವಿೂರಿ ಹೋಗಿದೆ. ನಾಳೆ ತಾವು ಈ ಬಗ್ಗೆ ಕ್ರಮತೆಗೆದುಕೊಳ್ಳದಿದ್ದರೆ, ಬಿಜಾಪುರ ಜಿಲ್ಲೆಯ ಪ್ರತಿನಿಧಿಗಳು ಇಲ್ಲಿ ಸತ್ಯಾಗ್ರಹ ಮಾಡುತ್ತೇವೆ ಎಂದ ತಮ್ಮ ಮೂಲಕ ಹೇಳ ತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರಿಗೆ ಪರಿಸ್ಥಿತಿಯ ಬಗ್ಗೆ ಇರುವಷ್ಟು ಕಾಳಜಿ ಸರ್ಕಾರಕ್ಕೂ ಕೂಡ ಇದೆಯೆಂದು ಇಷ್ಟು ಮಾತ್ರ ಹೇಳಬಲ್ಲೆ. ಅಲ್ಲಿ ಏನಾದರೂ ಆಗಲೇ ಎಂದು ನಮ್ಮನೆ ಇರುತ್ತೇವೆಯೇ ? ನಾವು ಆಗಿಂದಾಗ್ಗೆ ರಿಪೋರ್ಟು ತರಿಸಿಕೊಳ್ಳುತ್ತೇವೆ. ಅಲ್ಲಿನ ಡೆಪ್ಯೂಟಿ ಕಮಿಷನರ್ ಬಂದು ನನ್ನನ್ನು ನೋಡಿದ್ದಾರೆ. ಈಗ ಇಮ್ಮೀಡಿಯಟ್ ಆಗಿ ಕ್ರಮ ತೆಗೆದು ಕೊಳ್ಳುವುದಕ್ಕೆ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟು ಕೆಲಸ ಪ್ರಾರಂಭ ಮಾಡಿ ಎಂದು ಹೇಳಿದ್ದೇವೆ. ಮತ್ತೆ, ಜೋಳ ಮತ್ತು ಬಾಜ್ರಾ ಮೂರು ಸಾವಿರ ಟನ್ ರಿಲೀಸ್ ಮಾಡಿದ್ದೇವೆ. ಜೋಳ ಸಾಕ್

(ಶ್ರೀ ಡಿ. ದೇವರಾಜ ಅರಸ್)

ಇಲ್ಲ ಎಂದು ನನಗೆ ಗೊತ್ತಿದೆ. ಆದ್ದರಿಂದ ಎಷ್ಟು ಬೇಕಾದರೂ ಗೋಧಿಯನ್ನು ಕಳುಹಿಸಿಕೊಡುತ್ತೇವೆ. ಬಾಜ್ರಾ ಮತ್ತು ಜೋಳ ಕಟ್ಟು ಹೋಗುತ್ತವೆ, ಎಂದು ಟೆಂಡರ್ ಕರೆದು ಕೊಟ್ಟು ಬಿಡಬೇಕೆಂದಿದ್ದೆವು. ಈಗ ಟೆಂಡರ್ ಕರೆದು ಬೇರೆಯವರಿಗೆ ಕೊಡೋಣ ಎಂದು ಇದ್ದುದನ್ನು ನಿಲ್ಲಿಸಿ, ಬಿಜಾಪುರ ಜಿಲ್ಲೆಗೆ ಕಳುಹಿಸಿಕೊಡಿ ಎಂದು ಹೇಳಿದ್ದೇವೆ. ಆಹಾರಧಾನ್ಯಗಳ ಫ್ರೈಸ್ ಜಾಸ್ತಿ ಯಾಗುತ್ತಿರುವುದರಿಂದ ಇದನ್ನು ನಾವು ಹಂಚುವುದಕ್ಕೆ ಬೇಗ ವ್ಯವಸ್ಥೆ ಮಾಡುತ್ತೇವೆಂದು ನಿನ್ನೆಯ ದಿವಸ ಹೇಳಿದ್ದೇನೆ. ಇನ್ನು 10 ಲಕ್ಷ ರೂಪಾಯಿನಲ್ಲಿ ಕಾರ್ಯ ಮಾಡುವುದರ ಜೊತೆಗೆ ಕೆಲವು ಕಡೆ, ನಾರಾ ಕೆಲಸಗಳು ಆಗಬೇಕು. ಕೃಷ್ಣಾ ಯೋಜನೆಯ ಒಳಗಡೆ ಇರತಕ್ಕ ನಾರೆ, ಇಂಡಿಗಿ ತಾಲ್ಲೂಕು ಸಿಂಧಗಿಗೆ ಬರುವುದಿದೆ. ಆ ಭಾಗದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ಕೂಡ ನೋಡಿಸುತ್ತಿದ್ದೇವೆ. ಈ ಕೆಲಸಗಳನ್ನು ಅಲ್ಲಿ ಪುರು ಮಾಡಿದರೆ ಜನರಿಗೆ ಸ್ವಲ್ಪ ಹೆಚ್ಚಾಗಿ ಕೆಲಸ ಸಿಕ್ಕುತ್ತದೆ. ಇನ್ನು ಕೆಲವರು, ನಲಹೆ ಕೊಟ್ಟರು, ಟ್ಯಾಂಕ್ ವರ್ಕ್ಸ್ ಮಾಡುವುದಕ್ಕೆ ಸಾಧ್ಯವಿದೆ ಎಂದು. ಟ್ಯಾಂಕ್ ಕೆಲಸಗಳಿಗೆ ಎಸ್ಟಿಮೇಟ್ಸ್ ಏನು ೀಂದೆ ಆಗಿವೆ ಅವುಗಳನ್ನು ತೆಗೆದು ಕೊಳ್ಳುವ ಪಾಸಿಬಿಲಿಟೀಸ್ ಇದೆಯೇ ಎಂದು ನೋಡಿ, ಸಾಧ್ಯವಾದರೆ ತೆಗೆದುಕೊಳ್ಳೋಣ ಎಂದು ಹೇಳಿದ್ದೇವೆ. ಅವರು ಸುಮ್ಮನೆ ಹೇಳುತ್ತಿದ್ದಾರೆ, ನಮ್ಮ ಪಾಡಿಗೆ ನಾವು ಸುಮ್ಮನೆ ಇದ್ದೇವೆ ಎಂದಲ್ಲ. ಮತ್ತೆ ಮಾನ್ಯ ಸದಸ್ಯರು ಒಂದು ಡಿಫಿಕಲ್ಟಿ ಹೇಳಿದರು. ಡ್ರಿಂಕಿಂಗ್ ವಾಟರ್‌ಗೋಸ್ಕರ ಬೋರ್ ವೆಲ್ಸ್‌ಗಳನ್ನು ತೆಗೆಯುವುದಕ್ಕೆ ಸಾಕಷ್ಟು ರಿಗ್ಸ್ ಇಲ್ಲ, ಈ ಡಿಸ್ಟ್ರಿಕ್ಟ್‌ಗೆ ಕೊಟ್ಟಿದ್ದ ರಿಗ್ಸ್, ಧಾರವಾಡದಲ್ಲಿ ಉಳಿದುಬಿಟ್ಟವೆ, ಅದನ್ನು ತರಿಸಬೇಕು ಎಂದು ಹೇಳಿದರು. ನಾನು ನಿನ್ನೆ ಕಾಂಟ್ಯಾಕ್ಟ್ ಮಾಡಿ, ರಿಗ್ಸ್ ಅನ್ನು ಮೂವ್ ಮಾಡುವುದಕ್ಕೆ ಹೇಳಿದ್ದೇನೆ. ಎಲ್ಲ ತೊಂದರೆ ಇದೆ ಅಲ್ಲ, ಬೋರ್ ವೆಲ್ಸ್ ಹಾಕಿಸಿ, ಕುಡಿಯುವ ನೀರಿನ ವ್ಯವಸ್ಥೆ ಮಾಡೋಣ. ನಿನ್ನೆ ಈ ವಿಷಯದ ಬಗ್ಗೆ ನಿಮ್ಮ ಜಿಲ್ಲೆಯ ಜಿಲ್ಲಾ ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ.

ಶ್ರೀ ಜೆ. ಎಸ್. ಕಬ್ಬಾರಿ.—ಡ್ರಾಟ್ ಕಂಡಿಷನ್ ನಲುವಾಗಿ 10 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದೀರಿ. ಈ ಹತ್ತು ಲಕ್ಷ ರೂಪಾಯಿ ಎಲ್ಲಾ ಕಡೆ ಕೆಲಸ ಮಾಡುವುದಕ್ಕೆ ಸಾಲುವುದಿಲ್ಲ. ಈಗ ಎಲ್ಲಾ ಭಾಗಗಳನ್ನು ಕವರ್ ಮಾಡಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ಇದು ನಮಗೆ 10 ಲಕ್ಷ ರೂಪಾಯಿ ಕೊಡುವ ಪ್ರಶ್ನೆಯಲ್ಲ, ಎಲ್ಲಾ ಕಡೆ ಕೆಲಸ ತೆಗೆದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ತಕ್ಷಣ ಆರ್ಡರ್ ಮಾಡಿ, ಎಂದು ಹೇಳುವುದು ಮುಖ್ಯವಾದ ವಿಚಾರವಾಗಿದೆ.

3-00 P.M.

Sri B. B. SAYANAK.—I want to know the law and order situation in Belgaum.

Sri D. DEVARAJ URS.—I will get the report and I will try to see that law and order situation there is brought under control.

Agreement on the Projects over the Cauvery River Basin

†ಶ್ರೀ ಎಚ್. ಡಿ. ದೇವೇಗೌಡ.—ಮುಖ್ಯಮಂತ್ರಿಗಳು ಸಭೆಯಲ್ಲಿರುವುದರಿಂದ ಒಂದು ವಿವರಣೆಯನ್ನು ಅವರಿಂದ ತಿಳಿದುಕೊಳ್ಳಬೇಕೆಂದು ಇದ್ದೇನೆ. ಫ್ಯಾಕ್ಟ್ಸ್ ಫೈಂಡಿಂಗ್ ಕಮಿಟಿಯವರು ಕೇರಳಕ್ಕೆ ಹೋಗಿದ್ದಾರೆ. ಕಮಿಟಿ ಸದಸ್ಯರಾದ ಶ್ರೀ ಅಹುಜಾ ಅವರು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕಾವೇರಿ ಬೇಸಿನ್‌ನಲ್ಲಿ ಕೇಂದ್ರದಿಂದ ಕ್ಲಿಯರ್ ಆಗದೆ ಇರತಕ್ಕ ಪ್ರಾಜೆಕ್ಟ್‌ಗಳನ್ನು ನಿಲ್ಲಿಸುವುದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ ಮತ್ತು ಕಾವೇರಿ ಪ್ರಾಜೆಕ್ಟ್ ಆಗುತ್ತಾ ಇರುವ ವಿಷಯ ಗೊತ್ತಿಲ್ಲ ಎಂದು ಅವರು ತಿಳಿಸಿದ್ದಾರೆ. ಅದಕ್ಕೆ ನಮ್ಮ ರಾಜ್ಯದ ನೀರಾವರಿ ರಾಜ್ಯ ಸಚಿವರು ಮತ್ತು ಮುಖ್ಯಮಂತ್ರಿಗಳು ಹಾಗೆ ಒಪ್ಪಿಗೆ ಕೊಟ್ಟಿಲ್ಲ ಎನ್ನುವುದನ್ನು ಹೇಳಿದ್ದಾರೆ. ಹಿಂದೆ ಪ್ರಸ್ತಾಪ ಮಾಡಿದಾಗ "at the appropriate time I am going to make a statement" ಎಂದು ಹೇಳಿದ್ದಾರೆ. ಇದರಲ್ಲಿ ಸ್ವಲ್ಪ ಗೊಂದಲ ಪ್ರಾರಂಭವಾಗಿದೆ. ಸಂಬಂಧಪಟ್ಟ ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಸದಸ್ಯರು, ಮೂರು ರಾಜ್ಯದ ಮುಖ್ಯಮಂತ್ರಿಗಳು ಕಾವೇರಿ ಬೇಸಿನ್‌ನಲ್ಲಿ